# “ಒಂದೇ ಬಾಪ್ತಿಸ್ಮ”

“ಒಂದೇ ಬಾಪ್ತಿಸ್ಮ” ಇರುವದೆಂದು ಪೌಲನು ಬರೆದನು (ಎಫೆಸ 4:5). ಈ “ಒಂದೇ ಬಾಪ್ತಿಸ್ಮ”ದಂತೆ ಸಾಮಾನ್ಯವಾಗಿ ಅರ್ಹತೆ ಹೊಂದಲು ತಿಳಿಯಲ್ಪಟ್ಟ ಎರಡು ಬಾಪ್ತಿಸ್ಮಗಳು, ಪರಿಶುದ್ಧಾತ್ಮನೊಂದಿಗೆ ಬಾಪ್ತಿಸ್ಮ ಮತ್ತು ನೀರಿನೊಂದಿಗೆ ಬಾಪ್ತಿಸ್ಮ. ಎರಡು ಬಾಪ್ತಿಸ್ಮಗಳ ಮಧ್ಯದಲ್ಲಿ ಒಂದು ಹೋಲಿಕೆಯನ್ನು ಮಾಡುವದರಿಂದ, ಪೌಲನು ಎಫೆಸದವರಿಗೆ ಬರೆದ ಪತ್ರಿಕೆಯನ್ನು ಬರೆದಾಗ ಜಾರಿಯಲ್ಲಿದ್ದ ಮತ್ತು ಅನಂತರದ ಶತಮಾನಗಳಲ್ಲಿ ಎಲ್ಲಾ ಜನಾಂಗಗಳಲ್ಲಿ ಮುಂದುವರಿಯುವ “ಒಂದೇ ಬಾಪ್ತಿಸ್ಮ” ಯಾವುದಾಗಿತ್ತು ಎಂಬುದನ್ನು ತೀರ್ಮಾನಿಸಲು ನಾವು ಶಕ್ತರಾಗುವೆವು. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಗಳು ಒಂದು ತೀರ್ಪನ್ನು ಮಾಡಲು ಸಹಾಯ ಮಾಡುವವು.

1. *ಪರಿಶುದ್ಧಾತ್ಮನೊಂದಿಗೆ ಬಾಪ್ತಿಸ್ಮವನ್ನು ಯಾರು ನಡಿಸಿದರು ಮತ್ತು ನೀರಿನ ಬಾಪ್ತಿಸ್ಮವನ್ನು ಯಾರು ನಡಿಸಿದರು?*

ತನ್ನ ನಂತರ ಬರುವಾತನು ಯೇಸುವು - ಪರಿಶುದ್ಧಾತ್ಮನೊಂದಿಗೆ ಬಾಪ್ತಿಸ್ಮ ಮಾಡಿಸುವನೆಂದು ಯೋಹಾನನು ಹೇಳಿದನು (ಮತ್ತಾಯ 3:11). ಬಾಪ್ತಿಸ್ಮ ಮಾಡಿಸುವದರಿಂದ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಬೇಕೆಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು (ಮತ್ತಾಯ 28:19). ಮನುಷ್ಯನಿಂದ ಮಾಡಿಸಲ್ಪಡುವ ಯಾವುದೇ ಬಾಪ್ತಿಸ್ಮವು ನೀರಿನ ಬಾಪ್ತಿಸ್ಮವಾಗಿದೆ, ಯಾಕಂದರೆ ಮನುಷ್ಯನು ಪರಿಶುದ್ಧಾತ್ಮನೊಂದಿಗೆ ಬಾಪ್ತಿಸ್ಮವನ್ನು ಮಾಡಿಸಲಿಲ್ಲ ಮತ್ತು ಮಾಡಿಸಲಾರನು. ಇದಲ್ಲದೆ, ಯೇಸುವು ನೀರಿನ ಬಾಪ್ತಿಸ್ಮ ಮಾಡಿಸಲಿಲ್ಲ (ಯೋಹಾನ 4:2); ಯೇಸುವಿನಿಂದ ಮಾಡಿಸಲ್ಪಟ್ಟ ಯಾವುದೇ ಬಾಪ್ತಿಸ್ಮವು ಪರಿಶುದ್ಧಾತ್ಮನ ಬಾಪ್ತಿಸ್ಮವಾಗಿತ್ತು.

2. *ಪರಿಶುದ್ಧಾತ್ಮನೊಂದಿಗೆ ಬಾಪ್ತಿಸ್ಮವನ್ನು ಯಾರು ಸ್ವೀಕರಿಸಬೇಕಾಗಿತ್ತು ಮತ್ತು ನೀರಿನ ಬಾಪ್ತಿಸ್ಮವನ್ನು ಯಾರು ಸ್ವೀಕರಿಸಬೇಕಾಗಿತ್ತು?*

ಪರಿಶುದ್ಧಾತ್ಮನೊಂದಿಗಿನ ಬಾಪ್ತಿಸ್ಮವು ಅಪೊಸ್ತಲರಿಗೆ ಮಾತ್ರವೇ ವಾಗ್ದಾನ ಮಾಡಲ್ಪಟ್ಟಿತ್ತು. ಸರ್ವನಾಮಗಳನ್ನು ಯೋಚಿಸುವಲ್ಲಿ, ಅಪೊಸ್ತಲರಿಗೆ ಯೇಸುವು ಅಪೊಸ್ತಲರ ಕೃತ್ಯಗಳು 1:2-5ರಲ್ಲಿ ಯೇಸುವು ಮಾತನಾಡುತ್ತಿದ್ದನೆಂಬಂತೆ ತೋರುತ್ತದೆ. ಯೇಸುವು ಆಜ್ಞೆಗಳನ್ನು ಕೊಟ್ಟಿದ್ದು “ಅಪೊಸ್ತಲರಿಗೆ” (ವಚನ 2). “ಇವರಿಗೆ” ಆತನು ತನ್ನನ್ನು ಜೀವಂತನಾಗಿ ಕಾಣಿಸಿಕೊಂಡನು, “ಅವರಿಗೆ” ನಲ್ವತ್ತು ದಿನಗಳ ಅವಧಿಯಲ್ಲಿ ಕಾಣಿಸಿಕೊಳ್ಳುತ್ತಿದ್ದನು (ವಚನ 3), ಮತ್ತು “ಅವರನ್ನು” ಕೂಡಿಸಿ “ಅವರಿಗೆ” - ಅಪೊಸ್ತಲರಿಗೆ - ತಂದೆಯು ವಾಗ್ದಾನ ಮಾಡಿದ್ದಕ್ಕಾಗಿ ಕಾದುಕೊಂಡಿರಿ (ವಚನ 4) ಎಂದು ಆಜ್ಞಾಪಿಸಿದನು, ಹಾಗೂ “ನಿಮಗಾದರೋ ಇನ್ನು ಸ್ವಲ್ಪ ದಿನಗಳೊಳಗಾಗಿ ಪರಿಶುದ್ಧಾತ್ಮನಲ್ಲಿ ಬಾಪ್ತಿಸ್ಮವಾಗುವುದು” (ವಚನ 5) ಎಂದು ಹೇಳಿದನು.

ಇದಕ್ಕೂ ಮೊದಲು, ಕೊನೆಯ ಭೋಜನದಲ್ಲಿ (ಯೋಹಾನ 13:2, 4), ಯೇಸುವು ತನ್ನ ಅಪೊಸ್ತಲರೊಂದಿಗೆ ಪ್ರತ್ಯೇಕವಾಗಿ ಮಾತಾಡಿದ್ದನು (ಮತ್ತಾಯ 26:20; ಲೂಕ 22:14). ಅವರಿಗೆ ಪರಿಶುದ್ಧಾತ್ಮನು ಕೊಡಲ್ಪಡುವನೆಂದು ವಾಗ್ದಾನ ಮಾಡಿದ್ದನು. ಆತ್ಮನು ಅವರಿಗೆ ಎಲ್ಲಾ ಸಂಗತಿಗಳನ್ನು ಬೋಧಿಸುವನು, ಯೇಸುವು ಹೇಳಿದ್ದ ಎಲ್ಲವನ್ನೂ ಅವರ ಜ್ಞಾಪಕಕ್ಕೆ ತರುವನು, ಮತ್ತು ಎಲ್ಲಾ ಸತ್ಯದಲ್ಲಿ ಅವರನ್ನು ನಡಿಸುವನು (ಯೋಹಾನ 14:25, 26; 15:26; 16:12, 13).

ಪಂಚಾಶತ್ತಮದ ದಿನದಂದು ಪರಿಶುದ್ಧಾತ್ಮನನ್ನು ಸ್ವೀಕರಿಸಿದವರು ಅಪೊಸ್ತಲರಾಗಿದ್ದರು, ಅಪೊಸ್ತಲರ ಕೃತ್ಯಗಳು 1:26 ಕೊನೆಯಲ್ಲಿ ನಮೂದಿಸಲ್ಪಟ್ಟವರು ಅವರಾಗಿದ್ದರು, ಹೀಗೆ ಅಪೊಸ್ತಲರ ಕೃತ್ಯಗಳು 2:1ರ "ಅವರು" ಅವರಾಗಿದ್ದಾರೆ, ಜನರ ಮುಂದೆ ನಿಂತುಕೊಂಡಿದ್ದವರು ಆವರಾಗಿದ್ದರು (ಅಪೊಸ್ತಲರ ಕೃತ್ಯಗಳು 2:14). ಏನು ಮಾಡಬೇಕೆಂದು ಜನಸಮೂಹವು ಅಪೊಸ್ತಲರನ್ನು ಕೇಳಿ ಕೊಂಡಿತು (ಅಪೊಸ್ತಲರ ಕೃತ್ಯಗಳು 2:6, 37).

ಪರಿಶುದ್ಧಾತ್ಮನಿಂದ ಬಾಪ್ತಿಸ್ಮವು ಅಪೊಸ್ತಲರಿಗಾಗಿ ಇದ್ದರೂ ಪರಿಶುದ್ಧಾತ್ಮನಿಂದ ಪ್ರಥಮ ಅನ್ಯ ಕ್ರೈಸ್ತರನ್ನು ಬಾಪ್ತಿಸ್ಮ ಮಾಡಿಸುವದರಿಂದ, ದೇವರು ಒಂದು ವ್ಯತ್ಯಾಸ ಮಾಡಿದನು. ಇದು, ದೇವರು ಅನ್ಯರನ್ನು - ಎರಡನೆಯ ತರಗತಿಯ ಕ್ರೈಸ್ತರಂತೆ ಅಲ್ಲ, ಆದರೆ ಯೆಹೂದಿ ಕ್ರೈಸ್ತರೊಂದಿಗೆ ಸಮಾನಸ್ಥಿತಿಯುಳ್ಳ ಕ್ರೈಸ್ತರಂತೆ ಸ್ವೀಕರಿಸುವನು ಎಂಬುದನ್ನು ತೋರಿಸಿತು (ಅಪೊಸ್ತಲರ ಕೃತ್ಯಗಳ 11:15-17). ಅಪೊಸ್ತಲರು ಮತ್ತು ಕುಟುಂಬದವರು ಹಾಗೂ, ಸ್ನೇಹಿತರೊಂದಿಗೆ ಕೊರ್ನೇಲ್ಯನು ಮಾತ್ರವೇ, ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಹೊಂದಿದವರೆಂದು ಪರಿಶುದ್ಧ ಬರಹಗಳಲ್ಲಿ ದಾಖಲಿಸಲ್ಪಟ್ಟಿದೆ. ಪೌಲನೂ ಸಹ ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಹೊಂದಿದವನೆಂದು ನಾವು ಊಹಿಸಬಹುದು, ಯಾಕಂದರೆ ಅವನು, "ಅತೀ ಶ್ರೇಷ್ಠರಾದ ಅಪೊಸ್ತಲರು ಅನ್ನಿಸಿಕೊಳ್ಳುವ ಆ ಜನರಿಗಿಂತ ಒಂದರಲ್ಲಿಯಾದರೂ ಕಡಿಮೆಯಾಗಲಿಲ್ಲ" ಎಂದು ಹೇಳಿದ್ದಾನೆ (2 ಕೊರಿಂಥ 12:11).

ನೀರಿನ ಬಾಪ್ತಿಸ್ಮವು ಎಲ್ಲಾ ಜನಾಂಗಗಳಿಗೂ ಎಲ್ಲಾ ಜಗತ್ತಿಗೂ ಇರುವುದೆಂದು ಯೇಸು ಹೇಳಿದನು (ಮತ್ತಾಯ 28:19; ಮಾರ್ಕ 16:15, 16). ಸುವಾರ್ತೆಯು ಸಾರಲ್ಪಟ್ಟಲ್ಲೆಲ್ಲಾ ಜನರು ಬಾಪ್ತಿಸ್ಮವನ್ನು ಸ್ವೀಕರಿಸಿದರು (ಅಪೊಸ್ತಲರ ಕೃತ್ಯಗಳು 2:41; 8:12, 38, 39; 9:18; 10:47, 48; 16:15, 33; 19:5). ಆದರೆ ಪರಿಶುದ್ಧಾತ್ಮನ ಬಾಪ್ತಿಸ್ಮವನ್ನಲ್ಲ. ಪೇತ್ರನ ಬರಹವು (1 ಪೇತ್ರ 3:21) ಮತ್ತು ಪೌಲನ ಪತ್ರಿಕೆಗಳು ಎಲ್ಲಾ ಕ್ರೈಸ್ತರು ನೀರಿನ ಬಾಪ್ತಿಸ್ಮ ಹೊಂದಿದರೆಂದು ಹೇಳುತ್ತೇವೆ (ರೋಮಾಪುರ 6:3, 4; 1 ಕೊರಿಂಥ 1:13; ಗಲಾತ್ಯ 3:27; ಕೊಲೊಸ್ಸೆ 2:12).

3. *ಪರಿಶುದ್ಧಾತ್ಮನ ಬಾಪ್ತಿಸ್ಮವು ಹೇಗೆ ಮಾಡಿಸಲ್ಪಟ್ಟಿತು ಮತ್ತು ನೀರಿನ ಬಾಪ್ತಿಸ್ಮವು ಹೇಗೆ ಮಾಡಿಸಲ್ಪಟ್ಟಿತು?*

ಪರಿಶುದ್ಧಾತ್ಮನ ಬಾಪ್ತಿಸ್ಮವು, ಅಪೊಸ್ತಲರ ಮೇಲೆ ಮತ್ತು ಪ್ರಥಮ ಅನ್ಯಜನ ಪರಿವರ್ತನೆ ಹೊಂದಿದವರ ಮೇಲೆ ಪರಿಶುದ್ಧಾತ್ಮನನ್ನು ಸುರಿಸಿದ್ದು ಕರ್ತನಿಂದ ಮಾಡಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 2:4, 17; 10:45). ಜನರನ್ನು ನೀರಿನಲ್ಲಿ ಹೂಣಿಡುವದರಿಂದ ಮತ್ತು ನೀರಿನಿಂದ ಹೊರಗೆ ಎಬ್ಬಿಸುವದರಿಂದ ಮಾನವ ಹಸ್ತಗಳಿಂದ, ನೀರಿನ ಬಾಪ್ತಿಸ್ಮವು ಮಾಡಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 8:38, 39; ರೋಮಾಪುರ 6:4; ಕೊಲೊಸ್ಸೆ 2:12).

4. *ಯಾರ ಹೆಸರಿನಲ್ಲಿ ಪರಿಶುದ್ಧಾತ್ಮನ ಬಾಪ್ತಿಸ್ಮವು ಮತ್ತು ನೀರಿನ ಬಾಪ್ತಿಸ್ಮವು ಮಾಡಿಸಲ್ಪಟ್ಟಿತು?*

ತಂದೆಯು ಯೇಸುವಿನ ಹೆಸರಿನಲ್ಲಿ, ಅಂದರೆ ಯೇಸವಿನ ಅಧಿಕಾರದಿಂದ ಪರಿಶುದ್ಧಾತ್ಮನನ್ನು ಕಳುಹಿಸುವನೆಂದು ಯೇಸುವು ಹೇಳಿದನು (ಯೋಹಾನ 14:26). "ತಂದೆಯ, ಕುಮಾರನ ಮತ್ತು ಪರಿಶುದ್ಧಾತ್ಮನ ಹೆಸರಿನಲ್ಲಿ" ನೀರಿನ ಬಾಪ್ತಿಸ್ಮ ಮಾಡಿಸಬೇಕೆಂದು ಯೇಸುವು ತನ್ನ ಶಿಷ್ಯರಿಗೆ ಆಜ್ಞಾಪಿಸಿದನು (ಮತ್ತಾಯ 28:19). ಹಾಗೆ ಮಾಡುವದರಲ್ಲಿ ಆತನ ಅಧಿಕಾರದಂತೆ, ಯೇಸುವಿನ ಹೆಸರಿನಲ್ಲಿ, ಅವರು

ಬಾಪ್ತಿಸ್ಮ ಮಾಡಿಸಿದರು.

5. *ಪರಿಶುದ್ಧಾತ್ಮನ ಬಾಪ್ತಿಸ್ಮವನ್ನು ಮತ್ತು ನೀರಿನ ಬಾಪ್ತಿಸ್ಮವನ್ನು ಸ್ವೀಕರಿಸಲು ಯಾವ ಅಗತ್ಯತೆಗಳು ಬೇಕು?*

ಪರಿಶುದ್ಧಾತ್ಮನ ಬಾಪ್ತಿಸ್ಮವನ್ನು ಹೊಂದಿಕೊಳ್ಳುವ ಮೊದಲು ಅಪೊಸ್ತಲರು ಯೆರೂಸಲೇಮಿನಲ್ಲಿ ಕಾದುಕೊಂಡಿರಬೇಕಾಗಿತ್ತು (ಅಪೊಸ್ತಲರ ಕೃತ್ಯಗಳು 1:4, 5). ಅಂಥ ಕಾಯ್ದುಕೊಂಡಿರುವಿಕೆಯು ಕೊರ್ನೇಲ್ಯನಿಗೆ ಬೇಕಾಗಿರಲಿಲ್ಲ, ಇಲ್ಲವೇ ಅವನ ಕುಟುಂಬದವರಿಗೂ ಸ್ನೇಹಿತರಿಗೂ ಬೇಕಾಗಿರಲಿಲ್ಲ. ಅವರ ಪರವಾಗಿ ಯಾವುದೇ ಅರ್ಹತಾಕಾರ್ಯವಿಲ್ಲದೇ ದೇವರು ಅವರಿಗೆ ಆತ್ಮನನ್ನು ನೇರವಾಗಿ ಕಳುಹಿಸಿದನು.

ನೀರಿನ ಬಾಪ್ತಿಸ್ಮ ಹೊಂದಬೇಕಾದರೆ, ನಾವು ದೇವರ ವಾಕ್ಯವನ್ನು ಕೇಳಬೇಕು (ಅಪೊಸ್ತಲರ ಕೃತ್ಯಗಳು 8:12; 18:8), ಯೇಸುವಿನಲ್ಲಿ ನಂಬಿಕೆಯಿಡಬೇಕು (ಮಾರ್ಕ 16:16), ಮಾನಸಾಂತರ ಪಡಬೇಕು (ಅಪೊಸ್ತಲರ ಕೃತ್ಯಗಳು 2:38), ಮತ್ತು ಯೇಸುವಿನಲ್ಲಿ ನಂಬಿಕೆಯನ್ನು ಅರಿಕೆ ಮಾಡಬೇಕು (ರೋಮಾಪುರ 10:9, 10). ಇವುಗಳನ್ನು ಮಾಡಿದವರಿಗಾಗಿ, ಕಾದುಕೊಂಡಿರುವಿಕೆಯ ಅಗತ್ಯತೆಯಿರಲಿಲ್ಲ (ಅಪೊಸ್ತಲರ ಕೃತ್ಯಗಳು 2:41; 8:12, 35-39; 16:33; 22:16; ನೋಡಿರಿ 9:18).

6. *ಯಾವ ಆಧಾರದ ಮೇಲೆ ಈ ಬಾಪ್ತಿಸ್ಮಗಳು ಸ್ವೀಕರಿಸಲ್ಪಟ್ಟವು?*

ಪರಿಶುದ್ಧಾತ್ಮನ ಬಾಪ್ತಿಸ್ಮವು ಒಂದು ವಾಗ್ದಾನದಂತೆ ಸ್ವೀಕರಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 1:4, 5) ನೀರಿನ ಬಾಪ್ತಿಸ್ಮವು ಒಂದು ಆಜ್ಞೆಯಂತೆ ವಿಧೇಯವಾಗಬೇಕು (ಅಪೊಸ್ತಲರ ಕೃತ್ಯಗಳು 10:48). ಬಾಪ್ತಿಸ್ಮವು ಆಜ್ಞಾಪಿಸಲ್ಪಡುವಾಗಲೆಲ್ಲಾ ಇಲ್ಲವೇ ಒಂದು ಆಜ್ಞೆಯಂತೆ ಸ್ವೀಕರಿಸಲ್ಪಡುವಾಗ ಅದು ನೀರಿನ ಬಾಪ್ತಿಸ್ಮವಾಗಿರತಕ್ಕದ್ದು, ನೀರಿನ ಬಾಪ್ತಿಸ್ಮವನ್ನು ಸ್ವೀಕರಿಸುವುದು ಯೇಸುವಿನ ಚಿತ್ತಕ್ಕೆ ನಾವು ವಿಧೇಯ ರಾಗುವದರ ಮೇಲೆ ಅವಲಂಬಿಸಿರುತ್ತದೆ. ಪರಿಶುದ್ಧಾತ್ಮನ ಬಾಪ್ತಿಸ್ಮವು ಯೇಸುವಿನ ಮೇಲೆ ಅವಲಂಬಿಸಿತ್ತು. ಯೇಸುವು ಈ ಬಾಪ್ತಿಸ್ಮವನ್ನು ನಮಗೆ ಕೊಡದಿದ್ದರೆ, ಅದು ನಮ್ಮ ತಪ್ಪಾಗಿರುವದಿಲ್ಲ; ಆದರೆ, ಅದು ಆತನ ಆಯ್ಕೆಯಾಗಿರುವುದು. ನಮ್ಮ ಕೃತ್ಯಗಳು ಪರಿಶುದ್ಧಾತ್ಮನ ಬಾಪ್ತಿಸ್ಮವನ್ನು ಕೊಡಲಾರವು.

7. *ಪರಿಶುದ್ಧಾತ್ಮನ ಬಾಪ್ತಿಸ್ಮವನ್ನು ಯಾರು ಸ್ವೀಕರಿಸಿದರು ಮತ್ತು ನೀರಿನ ಬಾಪ್ತಿಸ್ಮವನ್ನು ಯಾರು ಸ್ವೀಕರಿಸಿದರು?*

ಪಂಚಾಶತ್ತಮ ಹಬ್ಬದಂದು (ಅಪೊಸ್ತಲರ ಕೃತ್ಯಗಳು 1:26-2:6, 14, 37) ಅಪೊಸ್ತಲರಿಗೆ ವಾಗ್ದತ್ತ ಪರಿಶುದ್ಧಾತ್ಮನು ಯೇಸುವಿನಿಂದ ಕೊಡಲ್ಪಟ್ಟನು (ಅಪೊಸ್ತಲರ ಕೃತ್ಯಗಳು 1:1-8). (ಅನಂತರ, ಈ ಸಂದರ್ಭವು "ಪ್ರಾರಂಭ" ಎಂದು ಹೇಳಲ್ಪಟ್ಟಿದೆ; ಅಪೊಸ್ತಲರ ಕೃತ್ಯಗಳು 11:15.) ಆತನು ಕೊರ್ನೇಲ್ಯನ ಮನೆಯವರನ್ನು ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಮಾಡಿಸಿದನು (ಅಪೊಸ್ತಲರ ಕೃತ್ಯಗಳು 11:15-18 ನೋಡಿರಿ 10:24). ಈ ಎರಡು ಸಮಯ ಮಾತ್ರ ಪರಿಶುದ್ಧಾತ್ಮನ ಬಾಪ್ತಿಸ್ಮದ ಸಂಗತಿಗಳು ಬೈಬಲಿನಲ್ಲಿ ದಾಖಲಿಸಲ್ಪಟ್ಟಿವೆ.

ಪರಿಶುದ್ಧಾತ್ಮನೊಂದಿಗೆ ಅನ್ಯಜನರ ಬಾಪ್ತಿಸ್ಮವನ್ನು ಕುರಿತು ಪೇತ್ರನು ಸಾಕ್ಷಿಕೊಟ್ಟಾಗ, "ಪರಿಶುದ್ಧಾತ್ಮ ವರವು ಮೊದಲು ನಮ್ಮ ಮೇಲೆ ಇಳಿದಂತೆ ಅವರ ಮೇಲೆ ಇಳಿಯಿತು" ಎಂದು ಹೇಳಿದ್ದಕ್ಕೆ ಹೆಚ್ಚು ಮಹತ್ವ ಕೊಡತಕ್ಕದ್ದು (ಅಪೊಸ್ತಲರ ಕೃತ್ಯಗಳು 11:15). ಎಲ್ಲಾ ಸಮಯಗಳಲ್ಲಿ ಹೊಸ ಕ್ರೈಸ್ತರ ಮೇಲೆ ಪರಿಶುದ್ಧಾತ್ಮನು ಬೀಳುತ್ತಿರುವಂತೆ ಅವರ ಮೇಲೆ ಬಿದ್ದನು ಎಂದು ಅವನು ಹೇಳಲಿಲ್ಲ. ಪ್ರಾರಂಭದಲ್ಲಿ ಅಪೊಸ್ತಲರು ಸ್ವೀಕರಿಸಿಕೊಂಡಂಥ ಪರಿಶುದ್ಧಾತ್ಮನ ಬಾಪ್ತಿಸ್ಮವನ್ನು ಅವನು ಉಲ್ಲೇಖಿ

ಸಿದನು (ಅಪೊಸ್ತಲರ ಕೃತ್ಯಗಳು 2:4).

ಇದರೊಂದಿಗೆ ಒಪ್ಪಿಕೊಂಡು, ಪೇತ್ರನ ಹೇಳಿಕೆಯ ಬಗ್ಗೆ ಫ್ರೆಡ್‌ರಿಕ್ ಡೇಲ್ ಬ್ರುನ್ನರ್ ಹೀಗೆ ಬರೆದನು:

> "ಪ್ರಾರಂಭದಲ್ಲಿ ನಮ್ಮ ಮೇಲೆ ಬಂದಂತೆ" (ವಚನ 15) ಪರಿಶುದ್ಧಾತ್ಮನು ಕೊರ್ನೇಲ್ಯನ ಮನೆಯವರ ಮೇಲೆ ಬಂದದ್ದನ್ನು ಅವನು ಒತ್ತಿ ಹೇಳಿದನು. ಈ ಟಿಪ್ಪಣಿಯು ಮಹತ್ವದ್ದಾಗಿದೆ. "ಪ್ರತಿಯೊಬ್ಬರಿಗೆ ಆತನು ಯಾವಾಗಲೂ ಮಾಡುವಂತೆ" ಪರಿಶುದ್ಧಾತ್ಮನು ಕೊರ್ನೇಲ್ಯನ ಮನೆಯವರ ಮೇಲೆ ಬಂದನೆಂದು ಪೇತ್ರನು ಹೇಳುವದಿಲ್ಲ. ಪೇತ್ರನು ಇದನ್ನು ಹೇಳಿದ್ದರೆ, ಆದಿ ಸಭೆಯಲ್ಲಿ ಪರಿಶುದ್ಧಾತ್ಮನು ಯಾವಾಗಲೂ, ಇಲ್ಲವೇ ಕನಿಷ್ಠ ಪಕ್ಷ ಸಾಮಾನ್ಯವಾಗಿ ವಾಣಿಗಳನ್ನಾಡುವದರೊಂದಿಗೆ ಕೊಡಲ್ಪಡುತ್ತಿದ್ದನು ಆದರೆ ಕೈಸರಯಕ್ಕೆ ಕೇವಲ ಸಮಾಂತರತೆಯನ್ನು ತೋರಿಸಲು ಪೇತ್ರನು ತಿಳಿದದ್ದು "ಪ್ರಾರಂಭದಲ್ಲಿ" ಏನು ಸಂಭವಿಸಿತೋ ಅದು ಮಾತ್ರ. ಪಂಚಾಶತ್ತಮದನಂತರ ಪಂಚಾಶತ್ತಮದ ಪ್ರತ್ಯಕ್ಷತೆಗಳು ಸಹಜವಾದವುಗಳಾಗಿರಲಿಲ್ಲ, ಆದರೆ ಬಹುಶಃ ತಿಳಿಯಲ್ಪಟ್ಟವುಗಳಾಗಿರಲಿಲ್ಲ.[1]

ಅನಂತರದಲ್ಲಿ, ಪೇತ್ರನು "ಅನ್ಯಜನರು ನನ್ನ ಬಾಯಿಂದ ಸುವಾರ್ತೆಯ ವಾಕ್ಯವನ್ನು ಕೇಳಿ ನಂಬಬೇಕೆಂದು ದೇವರು ಬಹಳ ದಿವಸಗಳ ಕೆಳಗೆ ನಿಮ್ಮೊಳಗಿಂದ ನನ್ನನ್ನು ಆರಿಸಿಕೊಂಡದ್ದು ನಿಮಗೆ ತಿಳಿದದೆ, ಮತ್ತು ಹೃದಯವನ್ನು ಬಲ್ಲವನಾಗಿರುವ ದೇವರು ಹೇಗೆ ಪರಿಶುದ್ಧಾತ್ಮ ವರವನ್ನು ನಮಗೆ ದಯಪಾಲಿಸಿದನೋ ಹಾಗೆಯೇ ಅವರಿಗೂ ದಯಪಾಲಿಸಿ. ಅವರನ್ನು ತನ್ನ ಜನರೆಂದು ಸಾಕ್ಷಿಕೊಟ್ಟನು" (ಅಪೊಸ್ತಲರ ಕೃತ್ಯಗಳು 15:7, 8), ಎಂದು ಈ ಘಟನೆಯನ್ನು ಉಲ್ಲೇಖಿಸಿದನು. ಅನ್ಯರನ್ನು ಸ್ವೀಕರಿಸಿಕೊಳ್ಳ ತಕ್ಕದ್ದೆಂದು ಯೆರೂಸಲೇಮಿನಲ್ಲಿಯ ಸಹೋದರರಿಗೆ ಒಪ್ಪಿಸುವದಕ್ಕಾಗಿ, ಪೇತ್ರನು ಪರಿಶುದ್ಧಾತ್ಮ ಬರುವಿಕೆಯು ಅನ್ಯರಿಗೆ ಮುಂದುವರಿಯುವ ಘಟನೆಯಾಗಿದೆಯೆಂದು ಹೇಳಲಿಲ್ಲ. ಅದರ ಬದಲು, ಕೊರ್ನೇಲ್ಯನ ಮನೆಯವರೂ, ಸ್ನೇಹಿತರೂ ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಹೊಂದಿದಾಗ, ಅವನು ಅನ್ಯರಿಗಾಗಿ ಒಂದೇಸಲದ ಘಟನೆಯನ್ನು ಉಲ್ಲೇಖಿಸುವುದು ಅಗತ್ಯವೆಂದು ಕಂಡುಕೊಂಡನು. ಈ ಕಾರಣಗಳಿಂದ, ಪರಿಶುದ್ಧಾತ್ಮನಿಂದ ಬಾಪ್ತಿಸ್ಮವು ಮುಂದುವರಿಯುವ ಘಟನೆಯಾಗಿರುವದಿಲ್ಲ, ಆದರೆ ಎರಡು ಭಿನ್ನವಾದ ಸಂದರ್ಭಗಳಲ್ಲಿ ಮಾತ್ರ ಸಂಭವಿಸಿತೆಂದು ತೀರ್ಮಾನಿಸಬೇಕಾಗುತ್ತದೆ: ಅಪೊಸ್ತಲರು ಪರಿಶುದ್ಧಾತ್ಮನಿಂದ ಬಾಪ್ತಿಸ್ಮ ಮಾಡಿಸಲ್ಪಟ್ಟ, ಪಂಚಾಶತ್ತಮ ದಿನ ಮತ್ತು ಅನ್ಯರಿಗೆ ಮೊದಲು ರಕ್ಷಣೆಯ ಬಾಗಿಲು ತೆರೆಯಲ್ಪಟ್ಟಾಗ (ಬಹುಶಃ ಮೂರನೆಯ ಸಲ ಇರಬಹುದು, ಅತೀ ಪ್ರಸಿದ್ಧರಾದ ಅಪೊಸ್ತಲರಿಗಿಂತ ಪೌಲನು ಕಡಿಮೆಯವನಾಗದಂತೆ; 2 ಕೊರಿಂಥ 12:11, 12).

ಎಲ್ಲಾ ಜನಾಂಗಗಳ ಜನರಿಗೆ ನೀರಿನ ಬಾಪ್ತಿಸ್ಮವು ಮಾಡಿಸಲ್ಪಟ್ಟಿತು. ಓದಿರಿ ಅಪೊಸ್ತಲರ ಕೃತ್ಯಗಳು 2:41; 8:12, 13, 38; 9:18; 10:48; 16:15, 33; 18:8; 19:5; 22:16. ಇವು ಸಹಜವಾಗಿ ನೀರಿನ ಬಾಪ್ತಿಸ್ಮದ ನಿದರ್ಶನಗಳಾಗಿವೆ, ಬಾಪ್ತಿಸ್ಮ ಹೊಂದಿದವರು ಮನುಷ್ಯನಿಂದ ಬಾಪ್ತಿಸ್ಮ ಹೊಂದಿದರು ಮತ್ತು/ಇಲ್ಲವೇ ಒಂದು ಆಜ್ಞೆಗೆ ವಿಧೇಯರಾದರು. ಇತರ ನಿದರ್ಶನಗಳು ಪತ್ರಿಕೆಗಳಲ್ಲಿ ಕಂಡುಬರುತ್ತವೆ (ರೋಮಾಪುರ 6:3, 4; 1 ಕೊರಿಂಥ 1:13-16; ಗಲಾತ್ಯ 3:27; ಎಫೆಸ 4:5; ಕೊಲೊಸ್ಸೆ 2:12; 1 ಪೇತ್ರ 3:21).

8. *ಪರಿಶುದ್ಧಾತ್ಮ ಬಾಪ್ತಿಸ್ಮದ ಉದ್ದೇಶವು ಯಾವುದಾಗಿತ್ತು ಮತ್ತು ನೀರಿನ ಬಾಪ್ತಿಸ್ಮದ ಉದ್ದೇಶವು ಯಾವುದಾಗಿತ್ತು?*

ಪರಿಶುದ್ಧಾತ್ಮನ ಬಾಪ್ತಿಸ್ಮದ ಉದ್ದೇಶವು ಅಪೊಸ್ತಲರಿಗೆ ಬಲವನ್ನು ಕೊಡುವುದು (ಅಪೊಸ್ತಲರ ಕೃತ್ಯಗಳು 1:8), ವಾಕ್ಯವನ್ನು ದೃಢಪಡಿಸುವುದು (ಮಾರ್ಕ 16:20; ಇಬ್ರಿಯ 2:3, 4), ಮತ್ತು ಯೇಸುವಿನ ವಾಕ್ಯಗಳನ್ನು ಪ್ರಕಟಿಸುವುದು ಆಗಿತ್ತು (ಯೋಹಾನ 14:26; 16:13). ಅದು ಅಪೊಸ್ತಲರನ್ನು ಯೇಸುವಿನ ವಿಶೇಷ ಪ್ರತಿನಿಧಿಗಳಂತೆ ಸಿದ್ಧಪಡಿಸಿತು, ಯಾಕಂದರೆ ಸೂಚಕ ಕಾರ್ಯಗಳೊಂದಿಗೆ ತಮ್ಮ ಹುದ್ದೆಯನ್ನು ದೃಢಪಡಿಸಿಕೊಳ್ಳಲು ಶಕ್ತರನ್ನಾಗಿ ಮಾಡಿತು (2 ಕೊರಿಂಥ 12:12). ಅನ್ಯರ ವಿಷಯದಲ್ಲಿ, ದೇವರು ಈ ಬಾಪ್ತಿಸ್ಮವನ್ನು, ಅನ್ಯ ಕ್ರೈಸ್ತರು ರಕ್ಷಣೆಯ ಸುವಾರ್ತೆಯನ್ನು ಸ್ವೀಕರಿಸುವವರು ಮತ್ತು ಪ್ರಥಮ ದರ್ಜೆಯ ಕ್ರೈಸ್ತರಂತೆ ಗೌರವಿಸಲ್ಪಡುವವರು ಎಂಬುದನ್ನು ಯೆಹೂದಿ ಕ್ರೈಸ್ತರಿಗೆ ಸಿದ್ಧಪಡಿಸಿ ತೋರಿಸಲು ಉಪಯೋಗಿಸಿದನು (ಅಪೊಸ್ತಲರ ಕೃತ್ಯಗಳು 10:47; 11:17; 15:7, 8).

ನೀರಿನ ಬಾಪ್ತಿಸ್ಮವು ದೇವರು ಪಾಪಗಳನ್ನು ಕ್ಷಮಿಸುವ ಮೊದಲು (ಅಪೊಸ್ತಲರ ಕೃತ್ಯಗಳು 2:38; ಕೊಲೊಸ್ಸೆ 2:12, 13), ಪಾಪಗಳನ್ನು ತೊಳೆಯುವ ಮೊದಲು (ಅಪೊಸ್ತಲರ ಕೃತ್ಯಗಳು 22:16), ಮತ್ತು ಪಾಪಗಳಿಂದ ರಕ್ಷಿಸುವ ಮೊದಲು (ಮಾರ್ಕ 16:16; 1 ಪೇತ್ರ 3:21) ನಂಬಿಕೆಯಿಂದ ಪಾಪಿಗಳು ಸ್ವೀಕರಿಸತಕ್ಕ ಅಗತ್ಯತೆಯಾಗಿರುತ್ತದೆ.

9. *ಎರಡು ಬಾಪ್ತಿಸ್ಮಗಳನ್ನು ಯಾವ ಪರಿಣಾಮಗಳು ಹಂಬಾಲಿಸಿದವು?*

ಪರಿಶುದ್ಧಾತ್ಮನ ಬಾಪ್ತಿಸ್ಮದ ಮುಖಾಂತರ, ಅಪೊಸ್ತಲರು ಅದ್ಭುತ ಕಾರ್ಯಗಳನ್ನು ಮಾಡಿದರು ಮತ್ತು ಅವರಿಗೆ ದೇವರ ವಾಕ್ಯವು ನೇರವಾಗಿ ಕೊಡಲ್ಪಟ್ಟಿತು (ಎಫೆಸ 3:3-5). ಅನ್ಯರು ಪರಿಶುದ್ಧಾತ್ಮನ ಬಾಪ್ತಿಸ್ಮ ಹೊಂದಿದ್ದರಿಂದ, ಪೇತ್ರನು ಅವರಿಗೆ ಬಾಪ್ತಿಸ್ಮ ಕೊಡಲು ಒಪ್ಪಿಕೊಂಡನು (ಅಪೊಸ್ತಲರ ಕೃತ್ಯಗಳು 10:47) ಅದರಿಂದ ಅವರು ರಕ್ಷಿಸಲ್ಪಡಲಿಕ್ಕೆ ಸಾಧ್ಯವಾಯಿತು (ನೋಡಿರಿ ಮಾರ್ಕ 16:16). ಅನ್ಯಜನರಿಂದ ಪರಿವರ್ತನೆ ಹೊಂದಿದವರನ್ನು ದೇವರಿಗೆ ಸ್ವೀಕಾರ ಯೋಗ್ಯವೆಂದು ಮತ್ತು ತಮ್ಮೊಂದಿಗೆ ಸಂಬಂಧದಲ್ಲಿರಲು ಯೋಗ್ಯರೆಂದು ಸ್ವೀಕರಿಸುವಂತೆ ಯೆಹೂದಿ ಕ್ರೈಸ್ತರು ಪ್ರೋತ್ಸಾಹಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 11:17, 18).

ನೀರಿನ ಬಾಪ್ತಿಸ್ಮವು ಪಾಪಗಳ ಕ್ಷಮಾಪಣೆಯಲ್ಲಿ (ಅಪೊಸ್ತಲರ ಕೃತ್ಯಗಳು 2:38), ನೂತನ ಜೀವನ (ರೋಮಾಪುರ 6:4), ಮತ್ತು ಒಂದು ದೇಹದಲ್ಲಿ (1 ಕೊರಿಂಥ 12:13), ಕ್ರಿಸ್ತನ ಸಭೆಯಲ್ಲಿ ಸದಸ್ಯತ್ವದಲ್ಲಿ (ಎಫೆಸ 1:22, 23) ಪರಿಣಾಮಗೊಂಡಿತು.

10. *ಯಾವ ಕೃತ್ಯಗಳು ಎರಡು ಬಾಪ್ತಿಸ್ಮಗಳನ್ನು ಹಿಂಬಾಲಿಸಿದವು?*

ಪರಿಶುದ್ಧಾತ್ಮನ ಬಾಪ್ತಿಸ್ಮ ಹೊಂದಿದವರು ಬೇರೆ ಭಾಷೆಗಳಲ್ಲಿ ಮಾತಾಡಿದರು (ಅಪೊಸ್ತಲರ ಕೃತ್ಯಗಳು 2:4; 10:45, 46), ನೀರಿನ ಬಾಪ್ತಿಸ್ಮ ಹೊಂದಿದವರು ಉಲ್ಲಾಸ ಪಟ್ಟರು (ಅಪೊಸ್ತಲರ ಕೃತ್ಯಗಳು 8:39; 16:33, 34).

ಎರಡು ಬಾಪ್ತಿಸ್ಮಗಳನ್ನು ಪುನರಾವಲೋಕನ ಮಾಡುವದರಲ್ಲಿ, ಯಾವುದು ಮುಂದುವರಿಯುವುದು ಮತ್ತು ಇಂದು ಎಲ್ಲಾ ಜನರಿಗೆ ಯಾವುದು ಅನ್ವಯಿಸುವುದು ಎಂಬುದನ್ನು ನೋಡಲು ಶಕ್ತರಾಗಿದ್ದೇವೆ. ನೀರಿನ ಬಾಪ್ತಿಸ್ಮವು ಎಲ್ಲಾ ಜನರಿಗಾಗಿ ಎಲ್ಲಾ ಸಮಯಕ್ಕಾಗಿ ಇತ್ತು; ಪರಿಶುದ್ಧಾತ್ಮನ ಬಾಪ್ತಿಸ್ಮವು ಜನರ ನೇಮಿತ ಗುಂಪಿಗೆ ಮಾತ್ರ ಮಿತಿಗೊಂಡಿತ್ತು. ನೀರಿನಿಂದ ಬಾಪ್ತಿಸ್ಮವು ರಕ್ಷಿಸಲ್ಪಡಲು ಬಯಸುವ ಎಲ್ಲಾ ಪಾಪಿಗಳ ಕೊರತೆಗಳನ್ನು ಪೂರೈಸುತ್ತದೆ. ಪರಿಶುದ್ಧಾತ್ಮನ ಬಾಪ್ತಿಸ್ಮವು ಕ್ರಿಸ್ತನ ವಾಕ್ಯಗಳನ್ನು

ಅಪೊಸ್ತಲರಿಗೆ ದೃಢಪಡಿಸಿತು ಮತ್ತು ಪ್ರಕಟಿಸಿತು. ಅವರು ಅವುಗಳನ್ನು ನಮಗಾಗಿ ಹೊಸ ಒಡಂಬಡಿಕೆಯಲ್ಲಿ ಕಾದಿಟ್ಟಿರುವರು. ಅನ್ಯಜನರ ಬಗೆಗಿನ ದಾಖಲೆಯು ಅನ್ಯಜನಾಂಗದವರಿಗಾಗಿರುವ ನಾವು ಕ್ರಿಸ್ತನ ಮುಖಾಂತರ ರಕ್ಷಣೆಯನ್ನು ಪಡೆದು ಕೊಳ್ಳಬಹುದು ಮತ್ತು ಕ್ರೈಸ್ತರಾದ ಯೆಹೂದ್ಯರಂತೆ ಅದೇ ಮಟ್ಟದಲ್ಲಿ ಸ್ವೀಕರಿಸಲ್ಪಡುತ್ತೇವೆ ಎಂಬುದಕ್ಕೆ ಪುರಾವೆಯಂತೆ ಕಾರ್ಯ ಮಾಡುತ್ತದೆ.

## ಸಾರಾಂಶ

ಪರಿಶುದ್ಧಾತ್ಮನ ಬಾಪ್ತಿಸ್ಮವು ಅಪೊಸ್ತಲರನ್ನು ಅವರ ಮಹಾ ಕಾರ್ಯಕ್ಕಾಗಿ ಸಿದ್ಧಪಡಿಸುವಲ್ಲಿಯ ಹಾಗೂ ಅನ್ಯಜನರಿಗೆ ಬಾಗಿಲನ್ನು ತೆರೆಯುವ ದೇವರ ಉದ್ದೇಶವನ್ನು ಸಾಧಿಸಿತು. ಆ ಉದ್ದೇಶಗಳು ಆಗಲೇ ಪೂರೈಸಲ್ಪಟ್ಟಿದ್ದರಿಂದ, ಪರಿಶುದ್ಧಾತ್ಮನ ಬಾಪ್ತಿಸ್ಮವು ತನ್ನ ಕಾರ್ಯವನ್ನು ಪೂರ್ತಿಗೊಳಿಸದೆ ಮತ್ತು ಹೀಗೆ ಅಂತ್ಯಗೊಂಡಿದೆ; ನೀರಿನ ಬಾಪ್ತಿಸ್ಮವು ಎಲ್ಲಾ ಜನಾಂಗಗಳಿಗೆ ಇನ್ನೂ ಅಗತ್ಯವಾಗಿದೆ; ಆದುದರಿಂದ ಯೇಸುವಿನ ರಕ್ತದ ಮುಖಾಂತರ ರಕ್ಷಣೆಯನ್ನು ಹುಡುಕುವ ಎಲ್ಲರಿಗಾಗಿ ಮುಂದುವರಿಯುತ್ತದೆ.

ಟಿಪ್ಪಣಿ

[1]Frederick Dale Bruner, *A Theology of the Holy Spirit: The Pentecostal Experience and the New Testament Witness* (Grand Rapids, Mich.: Wm. B. Eerdmans Publishing Co. 1970), 194.

## ಬಾಪ್ತಿಸ್ಮದ ಅರ್ಥ

ಜಾನ್ ಸ್ಟೊಟ್ಟ್ ಹೀಗೆ ಬರೆದನು, "ಮೊದಲು, ಬಾಪ್ತಿಸ್ಮ ಅಂದರೆ ಅದರ ಹಿನ್ನೆಲೆಯಲ್ಲಿ ಭಿನ್ನವಾಗಿ ಹೇಳಿದ್ದನ್ನು ಬಿಟ್ಟರೆ ನೀರಿನ ಬಾಪ್ತಿಸ್ಮವಾಗಿತ್ತು ... ಆದರೆ 'ಬಾಪ್ತಿಸ್ಮ' ಮತ್ತು 'ಬಾಪ್ತಿಸ್ಮ ಮಾಡಿಸಿಕೊಳ್ಳುವುದು' ಎಂಬ ಮಾತುಗಳು ಬರುವಾಗಲ್ಲೆಲ್ಲಾ, ಯಾವುದರಲ್ಲಿ ಬಾಪ್ತಿಸ್ಮವು ಮಾಡಿಸಲ್ಪಡುತ್ತದೆ ಎಂಬುದನ್ನು ಹೇಳದೇ ಇರುವಲ್ಲಿ, ಅದು ನೀರಿನ ಬಾಪ್ತಿಸ್ಮ ಎಂದು ಹೇಳುವುದು ಸುರಕ್ಷಿತವಾಗಿರುತ್ತದೆ. ನೀರಿನ ಬಾಪ್ತಿಸ್ಮ ಎಂಬ ಅರ್ಥವಿಲ್ಲದೇ ಇರುವಾಗಲೆಲ್ಲಾ ಬಾಪ್ತಿಸ್ಮದ ಬೇರೆ ಮೂಲವಸ್ತುವಿನ ಬಗ್ಗೆ ಹೇಳಲ್ಪಟ್ಟಿರುತ್ತದೆ; ಉದಾಹರಣೆಯಾಗಿ, 'ಆತ್ಮನೊಂದಿಗೆ.' "[1]

Albrecht Oepke ಇದರೊಂದಿಗೆ ಒಪ್ಪಿಕೊಳ್ಳುತ್ತಾನೆ: "ಬಾಪ್ತಿಸ್ಮಕ್ಕೆ ಹೊಸ ಒಡಂಬಡಿಕೆಯ ಉಲ್ಲೇಖಗಳು, ಹಿನ್ನೆಲೆಯು ಬೇರೆಯದನ್ನು ಸೂಚಿಸದಿದ್ದರೆ ನೀರಿನ ಬಾಪ್ತಿಸ್ಮ ಎಂದು ತಿಳಿಯತಕ್ಕದ್ದು. ಬಾಪ್ತಿಸ್ಮ ಪ್ರಯೋಗಿಕವಾಗಿ 'ನೀರಿನಲ್ಲಿ ಬಾಪ್ತಿಸ್ಮ ಮಾಡಿಸು' ಎಂದರ್ಥ ಕೊಡುತ್ತದೆ. ಆದುದರಿಂದ ಒಂದು ಮಾಧ್ಯಮವನ್ನು ಸ್ಪಷ್ಟವಾಗಿ ಹೇಳುವುದು ಅನಾವಶ್ಯಕವಾಗಿದೆ."[2]

ಟಿಪ್ಪಣಿಗಳು

[1]John Stott, *Romans: God's Good News for the World* (Downers Grove, Ill.: InterVarsity Press, 1994), 173. [2]Albrecht Oepke, "*baptizo,*" *Theological Dictionary of the New Testament,* vol. 1, ed. Gerhard Kittle, trans. Geoffrey W. Bromiley (Grand Rapids Mich.: Wm. B. Eerdmans Publishing Co., 1964), 539.



© 2009 Truth for Today